ಪಾಠ–7 ಮೇ 11–17

# ಕುಟುಂಬದ ಐಕ್ಯತೆಗೆ ಕೀಲಿಕೈಗಳು (ಬೀಗದ ಕೈಗಳು)



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಆದಿಕಾಂಡ 33:12–14, ರೂತಳು 1:16–18; ಯೋಹಾನ 17:21–26; ಗಲಾತ್ಯ 3:28; ಎಫೆಸ 2:11–22, ಎಫೆಸ 5:21–6:9.

**ಸ್ಮರಣವಾಕ್ಯ : ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವುದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರು ನಮ್ಮಲ್ಲಿರಬೇಕೆಂತಲೂ ಕೇಳಿಕೊಳ್ಳುತ್ತೇನೆ (ಯೋಹಾನ 17:21).**

ಕೌಟುಂಬಿಕ ಜೀವನವು ನಾನಾ ಬಗೆಯ ಜನರ ಜೀವನದ ನಾನಾ ಕಾಲಗಳನ್ನು ತಂದೆ–ತಾಯಿಗಳ ಜೀವಿತಾವಧಿಯಲ್ಲಿ ಶಾಶ್ವತವಾಗಿ ಉಳಿಯುವ ದೊಡ್ಡ ಬದಲಾವಣೆಯನ್ನು ಪ್ರತಿನಿಧಿಸುತ್ತದೆ. ಇದು ಮಕ್ಕಳ ಜೀವಿತದಲ್ಲೂ ಇಲ್ಲದಿರುವಿಕೆಯಿಂದ ಇರುವಿಕೆಗೆ ಸಾಗುವುದು ನಿಜವಾಗಿಯೂ ದೊಡ್ಡ ಬದಲಾವಣೆಯಾಗಿದೆ. ನಂತರ ಮಕ್ಕಳು ತಲುಪಿ ತಮಗೆ ಮಕ್ಕಳಾಗಿ ಮನೆಬಿಡುವವರೆಗೂ ಜೀವನದ ವಿವಿಧ ಹಂತಗಳನ್ನು ಕಾಣುತ್ತಾರೆ.

ಆದಾಗ್ಯೂ ಹೆತ್ತವರೇ ಆಗಲಿ, ಮಕ್ಕಳೇ ಆಗಲಿ ನಾವೆಲ್ಲರೂ ನಮ್ಮ ಪಾಪಮಯ ಸ್ವಭಾವದಿಂದ ಕುಟುಂಬದ ಐಕ್ಯತೆಗೆ ಸವಾಲಾಗಿರುವ ಒಂದೇ ಬಗೆಯಾದ ಹೋರಾಟವನ್ನು ಮಾಡುತ್ತಾ ಬರುತ್ತವೆ.

ಪ್ರತಿ ಮನುಷ್ಯರೂ ಶಿಲುಬೆಯನ್ನೇರಿದ ಕ್ರಿಸ್ತನ ದೇಹದ ಮೂಲಕ ದೇವರೊಂದಿಗೆ ಮತ್ತು ಇತರರೊಂದಿಗೆ ಸಮಾಧಾನ ಹೊಂದುತ್ತಾರೆ (ಎಫೆಸ 2:13–16) ಮತ್ತು ಕೊಲಸ್ಸೆ 1:21–23). ಆದರೆ ನಮ್ಮ ದೈನಂದಿನ ವ್ಯವಹಾರಿಕ ಮಟ್ಟದಲ್ಲಿ ನಾವು ನಮ್ಮನ್ನು ಕ್ರಿಸ್ತನ ಕೃಪೆಗೆ ಮೀಸಲಾಗಿಸಬೇಕು. ಇದು ಮಾತ್ರವೇ ನಂಬಿಕೆಯಿಂದ ಬಯಸುವವರೆಲ್ಲರಿಗೂ ಕೌಟುಂಬಿಕ ಐಕ್ಯತೆಯು ಜೀವಿತದ ಅನುಭವವಾಗಿರುತ್ತದೆ. ನಮ್ಮ ಜೀವನದಲ್ಲಿ ಇದು ಪ್ರತಿನಿತ್ಯದ ಅನುಭವವಾಗಿರಬೇಕು. ಕ್ರಿಸ್ತನ ಕೃಪೆಯಿಂದ ಮತ್ತು ದೈವದೆಸೆಯಿಂದ ಇದು ಸಾಧ್ಯವಾಗುತ್ತದೆ.

ಈ ವಾರದ ಪಾಠವನ್ನು ಮೇ 18ರ ಸಬ್ಬತ್ತಿಗೆ ಅಧ್ಯಯನ ಮಾಡಿರಿ. ಅಂತಹ ಪ್ರೀತಿಯು ದೇವರ ಸ್ವಭಾವವಾಗಿದೆ (1 ಯೋಹಾನ 4:8). ಇದು ಕ್ರಿಸ್ತನ ಅನುಯಾಯಿಗಳನ್ನು ಗುರುತು ಹಚ್ಚುತ್ತದೆ (ಯೋಹಾನ 13:35).

**ಭಾನುವಾರ** **ಮೇ 12**

## ಕ್ರಿಸ್ತನೇ ಕೇಂದ್ರಬಿಂದು

ಯಾವ ಉದಾಹರಣೆಯಿಂದ ಪೌಲನು ಜನರ ಮಧ್ಯೆಯಿರುವ ಒಗ್ಗಟ್ಟನ್ನು ವಿವರಿಸುತ್ತಾನೆ? ಕ್ರಿಸ್ತನು ಹೇಗೆ ಎರಡನ್ನು ಒಂದನ್ನಾಗಿ ಮಾಡುತ್ತಾನೆ? ಎಫೆಸ 2:11–22 ಮತ್ತು ಗಲಾತ್ಯ 3:28ನ್ನು ಸಹಾ ನೋಡಿರಿ.

ಜನಗಳಲ್ಲಿ ಒಬ್ಬರಿಗೊಬ್ಬರನ್ನು ಅಗಲಿಸುವ ಅಡೆತಡೆಗಳನ್ನು ಯೇಸುಕ್ರಿಸ್ತನ ಶಿಲುಬೆ ತೆಗೆದುಹಾಕುತ್ತದೆ.

ಯೆಹೂದ್ಯರ ಸಭಾಮಂದಿರಗಳಲ್ಲಿ ಗೋಡೆಗಳು ಸ್ತ್ರೀ ಪುರುಷರನ್ನು ಯೆಹೂದ್ಯರು ಹಾಗೂ ಅನ್ಯರನ್ನು ಬೇರ್ಪಡಿಸುತ್ತವೆ. ಯೆಹೂದ್ಯರ ಮತ್ತು ಅನ್ಯರ ನಡುವೆ ಇರುವ ಐಕ್ಯತೆಯನ್ನು ವಿವರಿಸುವವರಿಗೆ ಪೌಲನು ರಾಷ್ಟ್ರಗಳ ಜನಾಂಗಗಳ ಸಾಮಾಜಿಕ ಮತ್ತು ಲೈಂಗಿಕ ವಿಭಾಗಗಳಿಗೆ ಅನ್ವಯವಾಗುವ ಉಭಯರನ್ನು ಭಾಷೆಯನ್ನು ಉಪಯೋಗಿಸುತ್ತಾನೆ. "ಆತನು ಸಮಾಧಾನ ಮಾಡುವವನಾಗಿ ಉಭಯರನ್ನು ತನ್ನಲ್ಲಿ ಒಬ್ಬ ನೂತನ ಪುರುಷನನ್ನಾಗಿ ನಿರ್ಮಿಸುತ್ತಾನೆ (ಎಫೆಸ 2:15). ಇದು ಮದುವೆಯಲ್ಲಿ ಒಂದಾಗುವ ದಂಪತಿಗಳಿಗೆ ನಿಜವಾಗಿ ಒಂದೇ ಶರೀರವಾಗುವ ಶುಭವಾರ್ತೆಯಾಗಿದೆ. ಹಾಗೆಯೇ

ದೀರ್ಘಕಾಲದಿಂದ ದೂರವಾಗಿರುವ ಕುಟುಂಬಗಳು ಯೇಸುಕ್ರಿಸ್ತನಲ್ಲಿ ನಂಬಿಕೆಯಿಡುವುದರಿಂದ ಒಂದಾಗುತ್ತಾರೆ.

ಯೇಸುಕ್ರಿಸ್ತನಲ್ಲಿ ಒಂದಾಗಿರುವ ಬಗ್ಗೆ ಸತ್ಯವೇದದ ವಾಕ್ಯಗಳನ್ನು ಉಲ್ಲೇಖಿಸುವುದು ಒಂದು ವಿಷಯವಾದರೆ ಅದನ್ನು ನಿಜವಾಗಿ ಅನುಭವಿಸುವುದು ಸಂಪೂರ್ಣವಾಗಿ ಇನ್ನೊಂದು ವಿಷಯುವಾಗುತ್ತದೆ. ನಮಗೆ ವಾಗ್ದಾನ ಮಾಡಲ್ಪಟ್ಟಿರುವ ಏಕತೆ ಮತ್ತು ಒಗ್ಗಟ್ಟನ್ನು ನಿಜಜೀವನದಲ್ಲಿ ಅನುಭವಿಸಲು ಸಾಧ್ಯವಾಗುವಂತೆ ಕ್ರಿಸ್ತನು ಯಾವ ವ್ಯವಹಾರಿಕ ಬದಲಾವಣೆಯನ್ನು ನಮ್ಮ ಜೀವನದಲ್ಲಿ ತರುತ್ತಾನೆ.

ಉದಾಹರಣೆಗೆ ರೋಮ 6:4–7; 2 ಕೊರಿಂಥ 5:17; ಎಫೆಸ 4:24–32 ನ್ನು ಓದಿರಿ.

ಒಂದು ದೊಡ್ಡವೃತ್ತವನ್ನು ಬರೆಯಿರಿ. ವೃತ್ತದ ಪರಿಧಿಯಿಂದ ಕೇಂದ್ರ ಬಿಂದು '0' ಕಡೆಗೆ ಗೆರೆಗಳನ್ನು ಎಳೆಯಿರಿ. (ಸೈಕಲ್ ಚಕ್ರದ ಸ್ಪೋರ್ಕ್ ಕಡ್ಡಿಗಳಂತೆ) ಗೆರೆಗಳು ಪರಿಧಿಯಿಂದ ಬೇರೆ ಬೇರೆಯಾಗಿ ಬಂದರೂ ಕೇಂದ್ರಬಿಂದುವಿನಲ್ಲಿ ಹತ್ತಿರವಾಗುತ್ತವೆ. ಹಾಗೆಯೇ ನಾವು ಕ್ರಿಸ್ತನ ಸಮೀಪಕ್ಕೆ ಬರುವಾಗ ಒಬ್ಬರಿಗೊಬ್ಬರು ಹತ್ತಿರವಾಗುತ್ತೇವೆ– ಎಲೆನ್ ಜಿ ವೈಟ್‌ರವರ ದಿ ಅಡ್ವೆಂಟಿಸ್ಟ್ ಹೋಮ್, ಪುಟ 179.

ತಂದೆ–ಮಕ್ಕಳ ನಡುವೆ, ಗಂಡ–ಹೆಂಡತಿಯ ನಡುವೆ ಯೇಸುಕ್ರಿಸ್ತನು ಮಧ್ಯಸ್ತನಾಗಿ ನಿಲ್ಲುತ್ತಾನೆ. ಆತನಿರುವುದು ಅನೇಕ ಸಲ ಇವರಿಗೆ ಗೊತ್ತಾಗುವುದೇ ಇಲ್ಲ. ಕ್ರಿಸ್ತನನ್ನು ಬಿಟ್ಟರೆ ಅವನ ವಾಕ್ಯ ಮತ್ತು ಅವನ ಅನುಸರಣೆಗಳನ್ನು ಬಿಟ್ಟರೆ ಹೊರಗಡೆ ಅವನೊಟ್ಟಿಗೆ ನೇರಸಂಪರ್ಕ ಸಾಧಿಸಲು ಸಾಧ್ಯವಾಗುವುದಿಲ್ಲ. Dietrich Bonhoeffer Publishing Co 1979), P. 108.

ನಿಮ್ಮ ಕುಟುಂಬವಾಗಲೀ ಸಭೆಯ ಕುಟುಂಬವಾಗಲಿ ವೃತ್ತದ ಕೇಂದ್ರ ಬಿಂದುವಿಗೆ ಎಷ್ಟು ಹತ್ತಿರದಲ್ಲಿದೆ?

**ಸೋಮವಾರ** **ಮೇ 13**

## ಆತನ ಪ್ರೀತಿಯ ಮೂಲಕ ಒಂದಾಗುವುದು

ನಿಮ್ಮಲ್ಲಿ ನಮ್ಮ ಪ್ರೀತಿಯು ಹೇಗೋ ಹಾಗೆಯೇ ನಿಮ್ಮ ಪ್ರೀತಿಯೂ ಒಬ್ಬರೊಬ್ಬರ ಮೇಲೆಯೂ ಎಲ್ಲಾ ಮನುಷ್ಯರ ಮೇಲೆಯೂ ಅಭಿವೃದ್ಧಿ ಹೊಂದಿ ಅತ್ಯಧಿಕವಾಗುವಂತೆ ಕರ್ತನು ಅನುಗ್ರಹಿಸಲಿ (1 ಥೆಸಲೋನಿಕ 3:12).

ಯೇಸುಕ್ರಿಸ್ತನು ತನ್ನ ತಂದೆಯೊಂದಿಗೆ ಒಂದಾಗಿರುವಂತೆ ತನ್ನ ಶಿಷ್ಯರು ಒಂದಾಗಿರಬೇಕೆಂದು ತಂದೆಗೆ ಪ್ರಾರ್ಥಿಸುತ್ತಾನೆ (ಯೋಹಾನ 17:22). ಕ್ರಿಸ್ತನು ಇಲ್ಲಿ ಏನು ಹೇಳುತ್ತಿದ್ದಾನೆ ಎಂಬುದರ ಸಾರಾಂಶವು ಐಕ್ಯತೆಯನ್ನು ಸಾಧಿಸಲು ಅಗತ್ಯವಾದ ವಿಶೇಷವಾಗಿ ಪ್ರೀತಿಯ ಪಾತ್ರರ ಮೇಲೆ ದೃಷ್ಟಿ ಬೀರುತ್ತದೆ. ಈ ಪ್ರಾರ್ಥನೆಯಲ್ಲಿ ಕ್ರಿಸ್ತನ ಮನಸ್ಸಿನಲ್ಲಿದದ್ದು ತನ್ನ ಅನುಯಾಯಿಗಳ ನಡುವೆ ಇರಬೇಕಾದ "ಒಗ್ಗಟ್ಟು". ತಂದೆಯ ವಾತ್ಸಲ್ಯಪೂರ್ಣವಾದ ಅನುಭವವು ಈ ಐಕ್ಯತೆಗೆ ಅವಶ್ಯವಾಗಿದೆ. ತಂದೆಯ ಪ್ರೀತಿಗೆ ಸತ್ಯವೇದದಲ್ಲಿರುವ 'Agape Love' ಎಂಬ ಪದವನ್ನು ಈ ಪ್ರಾರ್ಥನೆಯಲ್ಲಿ ನೋಡುತ್ತೇವೆ ಮತ್ತು ಹೊಸ ಒಡಂಬಡಿಕೆಯಲ್ಲಿ ಇತರ ಸಂದರ್ಭಗಳಲ್ಲಿಯೂ ನೋಡುತ್ತೇವೆ (1 ಯೋಹಾನ 4:8). ಇದು ಕ್ರಿಸ್ತನ ಅನುಯಾಯಿಗಳನ್ನು ಗುರುತಿಸುತ್ತದೆ (ಯೋಹಾನ 13:35). ದೇವರ ಪ್ರೀತಿಯು ಪಾಪಪೂರಿತ ಹೃದಯಕ್ಕೆ ಸ್ವಾಭಾವಿಕವಾದುದಾಗಿರುವುದಿಲ್ಲ. ಯೇಸುಕ್ರಿಸ್ತನ ಆತ್ಮದಿಂದ ಇದು ಒಬ್ಬನ ಜೀವಿತದಲ್ಲಿ ಯೇಸುವು ನೆಲೆಸುವುದರಿಂದ ಬರುತ್ತದೆ (ರೋಮ 5:5, 8:9,11). ನಾನು ನಿಮ್ಮನ್ನು ಪ್ರೀತಿಸಿದಂತೆ ನೀವು ಒಬ್ಬರಿಗೊಬ್ಬರು ಪ್ರೀತಿಸಿರಿ– ಯೋಹಾನ 15:12. ಈ ವಾಕ್ಯಗಳನ್ನು ಬರೆದಿರುವ ಯೋಹಾನನು ಒಂದೊಮ್ಮೆ ಪ್ರೀತಿ ಮಾಡುವವನಾಗಿರದೆ ಜಂಭಪಡುವವನೂ ಅಧಿಕಾರದ ಹಸಿವುಳ್ಳವನೂ, ತಪ್ಪು ಹುಡುಕುವವನೂ, ಸಿಟ್ಟಿನ ಸ್ವಭಾವದವನೂ ಆಗಿದ್ದನು. ಮಾರ್ಕ 3:17, ಲೂಕ 9:54,55 ಮತ್ತು ಡಿಸೈರ್ ಆಫ್ ಏಜೆಸ್ನ ಪುಟ 295ನ್ನು ನೋಡಿರಿ. ನಂತರ ಈ ಗುಣಸ್ವಭಾವವನ್ನು ಹೊಂದಿದ್ದಾಗ್ಯೂ ಯೇಸುಕ್ರಿಸ್ತನು ಹೇಗೆ ತನ್ನನ್ನು ಪ್ರೀತಿಸುತ್ತಾ ಬಂದನೆಂದು ನೆನಸಿಕೊಳ್ಳುತ್ತಾನೆ. ಕ್ರಿಸ್ತನ ಪ್ರೀತಿಯು ಯೋಹಾನನು ಸಹಾ ಮತ್ತೊಬ್ಬರನ್ನು ಪ್ರೀತಿಸುವುದಕ್ಕಾಗುವಂತೆ

ಅವನನ್ನು ಬದಲಾಯಿಸಿತು. ಆತನು ಮೊದಲು ನಮ್ಮನು ಪ್ರೀತಿಸಿದುದರಿಂದ ನಾವು ಆತನನ್ನು ಪ್ರೀತಿಸಿದೆವು (1 ಯೋಹಾನ 4:19) ಓದಿರಿ. 1 ಕೊರಿಂಥ 13:4–8. ಈ ವಚನಗಳಲ್ಲಿರುವ 'ಪ್ರೀತಿ' ಎಂಬ ಪದವನ್ನು ತೆಗೆದು ಅದರ ಜಾಗದಲ್ಲಿ ನಿಮ್ಮ ಹೆಸರನ್ನು ಹಾಕಿಕೊಂಡು ಓದಿರಿ. ಎಷ್ಟು ಸಮಂಜಸವಾಗಿ ಇದು ನಿಮಗೆ ಸರಿಹೊಂದುತ್ತದೆ? ಪ್ರೀತಿಯ ಎಲ್ಲಾ ಸ್ವಭಾವಗಳು ನಮ್ಮ ಜೀವಿತದಲ್ಲಿ ತೋರಿಬರುವಂತೆ ಯೇಸುಕ್ರಿಸ್ತನನ್ನು ಕೇಳಿಕೊಳ್ಳಿರಿ.

ಈ ಕ್ರೈಸ್ತ ಆದರ್ಶವನು ತಲುಪುವುದಕ್ಕೆ ಆತಮವು ಯಾವ ಬದಲಾವಣೆಗಳನ್ನು ನಮ್ಮಲ್ಲಿ ತೋರಿಸುತ್ತದೆ?

**ಮಂಗಳವಾರ** **ಮೇ 14**

## ಸ್ವಾರ್ಥತೆ ಕುಟುಂಬ ನಾಶಕ

ಐದು ನಿಮಿಷಗಳ ಮಟ್ಟಿಗೆ ಅಹಂಕಾರ ಮತ್ತು ಸ್ವಾರ್ಥವನ್ನು ಬಿಟ್ಟರೆ ಬಹುತೇಕ ಕಷ್ಟಗಳನ್ನು ತೆಗೆದುಹಾಕಬಹುದು– ಎಲೆನ್ ಜಿ ವೈಟ್‌ರವರ ದಿ ಅರ್ಲಿ ರೈಟಿಂಗ್ಸ್, ಪುಟ 119.

ಪಾಪದಿಂದ ನಮ್ಮ ಸ್ವಭಾವವು ಕೆಟ್ಟು ಹೋಗಿದೆ. ಬಹುಶಃ ಇದಕ್ಕೆ ಇರುವ ದೊಡ್ಡ ಉದಾಹರಣೆ ಸ್ವಾರ್ಥತೆಯ ಶಾಪವಾಗಿದೆ. ನಾವು ಸ್ವಾರ್ಥಿಗಳಾಗಿ ಹುಟ್ಟಿದ್ದೇವೆ ಎಂದು ಕಾಣಿಸುತ್ತದೆ. ಈ ವಾಸ್ತವಿಕವನ್ನು ಮಕ್ಕಳಲ್ಲಿ ಕಾಣಬಹುದು. ಅವರ ಮೂಲಸ್ವಭಾವವು ಯಾವಾಗಲೂ ನಾನು, ನನ್ನದು, ನನಗೆ ಎಂಬ ಅಪೇಕ್ಷೆಗಳೇ ಅವರಿಗಿರುತ್ತವೆ. ಅವರು ದೊಡ್ಡವರಾದಾಗಲೂ ಈ ಗುಣಸ್ವಭಾವಗಳೇ ಅವರಲ್ಲಿ ಸಾಕಷ್ಟು ಬೆಳೆದು ಭಯಂಕರವಾಗಿ ವ್ಯಕ್ತವಾಗುತ್ತವೆ. ವಿಶೇಷವಾಗಿ ಮನೆಯಲ್ಲಿ ಇದನ್ನು ನಾವು ಕಾಣಬಹುದು. ಆದರೆ ಯೇಸುಕ್ರಿಸ್ತನು ಇದನ್ನು ಬದಲಿಸುವುದಕ್ಕಾಗಿ ಬಂದನು (ಎಫೆಸ 4:24). ಈ ನಾಶಕರ ಗುಣಸ್ವಭಾವವು ನಮ್ಮಲ್ಲಿ ಪ್ರಬಲವಾಗಿರದಂತೆ ಆತನ ವಾಕ್ಯಗಳು ನಮಗೆ ಭರವಸೆ ಕೊಡುತ್ತವೆ.

ನಾವೆಲ್ಲರೂ ಅನುಸರಿಸಲು ಯೋಗ್ಯವಾದ ಪರಿಪೂರ್ಣ ಉದಾಹರಣೆಯ ಸ್ವಾರ್ಥರಹಿತ ಜೀವನವೆಂದರೆ ಏನೆಂಬುದನ್ನು ಕ್ರಿಸ್ತನ ಇಡೀ ಜೀವನವೇ ತಿಳಿಸುವಂಥದ್ದಾಗಿದೆ (1 ಯೋಹಾನ 2:6).

ನಾವು ಜೀವಿಸುವುದು ನಮಗಾಗಿ ಮಾತ್ರ ಎಂಬ ಧೋರಣೆಯನ್ನು ಗೆಲ್ಲಲು ಸಾಧ್ಯವಾಗುತ್ತದೆ.

ಈ ಕೆಳಗಿನ ಪಠ್ಯಗಳನ್ನು ನೋಡಿರಿ. ನಿಸ್ವಾರ್ಥ ಜೀವಿತವನ್ನು ಜೀವಿಸುವವರ ಬಗ್ಗೆ ಇವು ಏನನ್ನು ಹೇಳುತ್ತವೆ (ಫಿಲಿಪ್ಪಿ 2:3–5, 1 ಯೋಹಾನ 3:16–18).

ಎಲೆನ್ ಜಿ ವೈಟ್‌ರವರು ಬರೆದ ಮೇಲಿನ ಸಾಲುಗಳು ಹೇಳುವ ಹಾಗೆ ನಾವು ಅಹಂಕಾರ ಮತ್ತು ಸ್ವಾರ್ಥವನ್ನು ಬದಿಗಿಟ್ಟರೆ ಅನೇಕ ಸಮಸ್ಯೆಗಳು ಕೈ ಕಷಾಂಯವಾಗಿ ಜುಗುಪ್ಸೆ ಹುಟ್ಟಿಸುವ ಮೊದಲೇ ಶೀಘ್ರವಾಗಿ ಪರಿಹರಿಸಿಕೊಳ್ಳಬಹುದು. ಕುಟುಂಬದ ಎಲ್ಲಾ ಸದಸ್ಯರು ಅದರಲ್ಲೂ ಪೋಷಕರು (ಜ್ಞಾನ 16:6) ನಿಸ್ವಾರ್ಥತೆಗೆ ಜಗತ್ತಿನಲ್ಲೇ ಅತ್ಯಂತ ದೊಡ್ಡ ಉದಾಹರಣೆಯಾಗಿರುವ ಕ್ರಿಸ್ತನ ಶಿಲುಬೆಯಡಿ ಶುದ್ಧೀಕರಣ ಹೊಂದಬೇಕು. ಇದು ಯಾವಾಗಲೂ ಶಿಲುಬೆಗೆ ಹಿಂದಿರುಗಿ ನಂಬಿಕೆಯಿಂದಲೂ ಕಣ್ಣೀರಿನಿಂದಲೂ ವಿನಮ್ರವಾಗಿ ಮೊಣಕಾಲೂರಿ ಪ್ರಾರ್ಥಿಸುವ ಅರ್ಥವುಳ್ಳದ್ದಾಗಿರಬಹುದು.

ನಿಮ್ಮ ಜೀವಿತದಲ್ಲಿ ಕಾಣುವ ಸ್ವಾರ್ಥದ ವಿರೋಧವಾಗಿ ಹೋರಾಟ ಮಾಡಲು ಶಿಲುಬೆಯಡಿ ಎಷ್ಟು ಸಮಯವನ್ನು ಕಳೆಯುತ್ತೀರಿ? (ಮತ್ತಾಯ 7:16).

ನೀವು ಸಾಕಷ್ಟು ಸಮಯವನ್ನು ಕಳೆಯುತ್ತಿದ್ದರೆ ಮತ್ತಾಯ 7:16 ಹೇಗೆ ಸಹಾಯ ಮಾಡುತ್ತದೆ?

**ಬುಧವಾರ** **ಮೇ 15**

## ಸಮರ್ಪಣೆ

ಸಂಬಂಧಗಳಲ್ಲಿ ವಿನಮ್ರತೆ ಮತ್ತು ಸೇವೆಯನ್ನು ಕುರಿತು ಪಾಲಿಸುವ ಯಾವ ಸಲಹೆಯನ್ನು ಕೊಡುತ್ತಾನೆ? ಎಫೆಸ 5:21 ಈ ಮನೋಧೋರಣೆಯು ಸಭೆಯಲ್ಲಿ ಐಕ್ಯತೆಗೆ ತನ್ನದೇ ಆದ ಕಾಣಿಕೆಯನ್ನು ನೀಡುತ್ತದೆಯೆಂದು ಹೇಗೆ ಆಲೋಚಿಸುವಿರಿ? ಇದು ಮನೆಯಲ್ಲಿ ಬಹಳ ಮುಖ್ಯವಾದುದಾಗಿದೆ ಹೇಗೆ? ಎಫೆಸ 5:22–6:9.

ಸಮರ್ಪಣೆ ಎಂಬ ಪದದ (ಎಫೆಸ 5:21) ಅರ್ಥವೇನೆಂದರೆ ಒಬ್ಬನು ಇನ್ನೊಬ್ಬನ ಮುಂದೆ ಸ್ವಇಚ್ಛೆಯ ಆಧಾರದ ಮೇಲೆ ತನ್ನನ್ನು ದೀನನನ್ನಾಗಿ

ಇರಿಸಿಕೊಳ್ಳುವುದೇ ಆಗಿದೆ. ಈ ವಿಶಿಷ್ಟವಾದ ತತ್ವವು ಯೇಸುಕ್ರಿಸ್ತನಲ್ಲಿ ಆರಂಭಗೊಂಡಿತು. (ಮತ್ತಾ 20:26–28, ಯೋಹಾನ 13:4–5, ಫಿಲಿಪ್ಪಿ 2:5–8) ಮತ್ತು ತನ್ನ ಆತ್ಮನಿಂದ ಇತರರನ್ನು ತುಂಬಿಕೊಳ್ಳುವ ವಿಶಿಷ್ಟತೆಯನ್ನು ನಿರೂಪಿಸುತ್ತದೆ (ಎಫೆಸ 5:18). ಕ್ರಿಸ್ತನಿಗೆ ಭಕ್ತಿ ತೋರಿಸುವುದು ಜನರು ಈ ರೀತಿಯಾಗಿ ಸಮರ್ಪಿಸಿಕೊಳ್ಳುವುದನ್ನು ತೋರಿಸುತ್ತದೆ (ಎಫೆಸ 5:21). ಪರಸ್ಪರ ತಮ್ಮನ್ನೇ ತಾವು ನಿರಾಕರಿಸಿಕೊಳ್ಳುವುದು (ಸ್ವನಿರಾಕರಣೆ) ಮೊದಲೂ ಇತ್ತು, ಈಗಲೂ ಇದೆ. ಇದು ಸಾಮಾಜಿಕ ಸಂಬಂಧಗಳನ್ನು ವೃದ್ಧಿಪಡಿಸುವುದಕ್ಕೆ ಕ್ರಾಂತಿಕರವಾದ ಕ್ರೈಸ್ತೀಯ ಬೋಧನೆಯಾಗಿದೆ. ಇದು ಯೇಸುಕ್ರಿಸ್ತನಲ್ಲಿ ಎಲ್ಲರೂ ಒಂದೇ ಎಂಬ ಆತ್ಮೀಕ ವಾಸ್ತವತೆಯನ್ನು ಜೀವಿತಕ್ಕೆ ತರುತ್ತದೆ. ಕ್ರೈಸ್ತೀಯ ಸಮರ್ಪಣೆಯನ್ನು ಸಾಬೀತು ಮಾಡುವ ನೆಲೆಯು ಕುಟುಂಬವೇ ಆಗಿದೆ. ಇದು ಮನೆಮಂದಿಯ ಒಂದು ತತ್ವವಾಗಿದೆ. ಈ ತತ್ವವು ಕುಟುಂಬದಲ್ಲಿ ಪರಿಣಾಮಕಾರಿಯಾದುದಾಗಿದ್ದರೆ ಸಭೆಯಲ್ಲೂ (ಒಮ್ಮೆಲೆ ನಾಟಕದ ದೃಶ್ಯವು ಬದಲಾಗುವಂತೆ) ಬದಲಾವಣೆಯಾಗುತ್ತದೆ.

ಪೌಲನು ಸಮರ್ಪಣೆ ತತ್ವವನ್ನು ಪರಿಚಯ ಮಾಡಿ ಒಮ್ಮೆಲೆ ಆ ತತ್ವವನ್ನು ಕುಟುಂಬಗಳಿಗೆ ಅನ್ವಯಿಸುವುದಕ್ಕೆ ಸರಿಯುತ್ತಾನೆ. ಮೂರು ಜೊತೆಯ ಸಂಬಂಧಗಳನ್ನು ಕುರಿತು ಎಫೆಸ 5:22 ರಿಂದ 6:9 ರವರೆಗೆ ಮಾತಾಡುತ್ತಾನೆ. ಇವು ಸಮಾಜದಲ್ಲಿ ಸರ್ವೇಸಾಮಾನ್ಯವಾದ ಸಂಬಂಧಗಳಾಗಿದ್ದಾಗ್ಯೂ ಬಹಳ ಅಸಮಾನತೆಯ ಸಂಬಂಧಗಳಾಗಿವೆ. ಈಗಾಗಲೇ ಅಸ್ತಿತ್ವದಲ್ಲಿರುವ ಸಾಮಾಜಿಕ ವ್ಯವಸ್ಥೆಯನ್ನು ಭದ್ರಪಡಿಸುವ ಉದ್ದೇಶವಲ್ಲ. ಆದರೆ ಕ್ರಿಸ್ತನ ನಂಬಿಕೆ ಸಂಸ್ಕೃತಿಯ (ಸುಧಾರಣೆಯ ತೀವ್ರತರ ಭಿನ್ನತೆ ಒಬ್ಬರಿಗೊಬ್ಬರು ವಿಶ್ವಾಸಿಗಳ ಸ್ವಸಮರ್ಪಣೆಯಲ್ಲಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ತೋರಿಸುತ್ತದೆ?

ಪೌಲನು ಸಾಮಾಜಿಕವಾಗಿ ಸಂಸ್ಕೃತಿಯಲ್ಲಿ ಬಲಹೀನರಾಗಿರುವ ಪತ್ನಿಯರು ಮಕ್ಕಳು ಮತ್ತು ಸೇವಕರಿಗೆ ಮೊದಲು ಸ್ಥಿರವಾಗಿ ಮಾತಾಡುತ್ತಾನೆಂದು ಏಕೆ ಆಲೋಚಿಸುವಿರಿ? ಇವುಗಳಲ್ಲಿ ಪ್ರತಿಯೊಂದರ ಸಮರ್ಪಣೆಗೆ ಜೋಡಿಸಿರುವ ಯೋಗ್ಯವಾದ ಪದಪುಂಜವನ್ನು ಬರೆಯಿರಿ?

ಸಾಮಾಜಿಕವಾಗಿ ಹೆಚ್ಚಿನ ಬಲವನ್ನು ಹೊಂದಿರುವ ಗಂಡಂದಿರು, ತಂದೆ-ತಾಯಿಗಳು, ಯಜಮಾನರನ್ನು ಎರಡನೆಯದಾಗಿ ಉಲ್ಲೇಖಿಸುತ್ತಾನೆ. ಇವುಗಳು ಸಂಸ್ಕೃತಿಗೆ ಸಾಮಾನ್ಯವಲ್ಲದ ಆದೇಶಗಳನ್ನು ಪಡೆಯುತ್ತವೆ. ಆ ಆದೇಶಗಳು ಮೊದಲ ಶತಮಾನದ ವಿಶ್ವಾಸಿಗಳನ್ನು ಆಶ್ಚರ್ಯಪಡಿಸಿರಬೇಕು. ಅವರು ಶಿಲುಬೆಯ ಸುತ್ತವಿದ್ದ ನೆಲವನ್ನು ಸಮತಟ್ಟಾಗಿ ಮಾಡಿ ಸಂಬಂಧಗಳಲ್ಲಿ ಐಕ್ಯತೆಯನ್ನು ಅನುಭವಿಸುವಂತೆ ಹಾದಿಗಳನ್ನು ತೆರೆದರು.

**ಗುರುವಾರ** **ಮೇ 16**

## ನಾವು ವಾಗ್ದಾನ ಮಾಡಿದ ಪ್ರೀತಿಯನ್ನು ಜೀವಿಸುವುದು

ಅಂತಿಮವಾಗಿ ಕುಟುಂಬದ ಸಂಲಗ್ನತೆ (ಸಹಬಾಳ್ವೆ) ಮತ್ತು ಐಕ್ಯತೆ ಅದರ ಸದಸ್ಯರ ಬದ್ಧತೆಯ ಮೇಲೆ ನಿಂತಿದೆ. ಒಬ್ಬರಿಗೊಬ್ಬರು ಕಾಳಜಿ ತೋರುವ ಈ ಬದ್ಧತೆಯು ಜೀವನ ಸಂಗಾತಿಗಳಾಗಿ ವಿವಾಹವಾದಾಗ ಆರಂಭವಾಗುತ್ತದೆ. ದುಃಖದ ಸಂಗತಿ ಏನೆಂದರೆ ಸತ್ಯವೇದದ ಚರಿತ್ರೆಯು ವಿಫಲವಾದ ವಾಗ್ದಾನಗಳಿಂದಲೂ, ಭಗ್ನವಾದ ನಂಬಿಕೆಗಳಿಂದಲೂ ಎಲ್ಲಿ ಬದ್ಧತೆ ಇರಬೇಕಾಗಿತ್ತೊ ಅಲ್ಲಿ ಅದರ ನ್ಯೂನತೆ (ಕೊರತೆ)ಗಳು ತುಂಬಿವೆ. ಆದರೆ ಪರಿಶುದ್ಧ ವಾಕ್ಯಗಳಲ್ಲಿ ಸಾಮಾನ್ಯ ಜನರು ದೇವರ ಸಹಾಯದಿಂದ ಸ್ನೇಹಿತರಿಗೂ ಕುಟುಂಬದವರಿಗೂ ಬದ್ಧರಾಗಿರುವ ಹುರಿದುಂಬಿಸುವ ಉದಾಹರಣೆಗಳಿಂದಲೂ ತುಂಬಿದೆ.

ಈ ಕೆಳಗೆ ಕೊಟ್ಟಿರುವ ಕುಟುಂಬಗಳನ್ನು ಅವರ ಬದ್ಧತೆಯ ಮಟ್ಟಗಳನ್ನು ನೋಡಿರಿ. ಹೇಗೆ ಬದ್ಧತೆಯು ಕೆಲವು ಕುಟುಂಬಗಳನ್ನು ಬಲಪಡಿಸಬಹುದಾಗಿತ್ತು? ಇತರರು ತೋರಿಸುವ ಬದ್ಧತೆಯನ್ನು ಯಾವುದು ಉತ್ತೇಜಿಸುತ್ತದೆ?

ಹೆತ್ತವರು ಮತ್ತು ಮಕ್ಕಳ ಬದ್ಧತೆ (ಆದಿಕಾಂಡ 33:12-14, ವಿಮೋಚನ ಕಾಂಡ 2:1-10), ಸೋದರರಲ್ಲಿ ಬದ್ಧತೆ (ಆದಿಕಾಂಡ 37:17-28). ಕುಟುಂಬದಲ್ಲಿ ಬದ್ಧತೆ ರೂತಳು 1:16-18; 2:11, 12, 20. 3:9-13; 4:10, 13. ವಿವಾಹದ ಬದ್ಧತೆ ಹೋಶೇಯ 1:2, 3,6,8 ಮತ್ತು 3:1-3.

ನಾವು ವಿವಾಹದಲ್ಲಿ ಇಲ್ಲವೇ ಮಗುವನ್ನು ಹಡೆಯುವುದಕ್ಕಾಗಲೀ ದತ್ತು ಸ್ವೀಕಾರ ಮಾಡುವುದಕ್ಕಾಗಲೀ ಇನ್ನೊಬ್ಬರ ಜೊತೆ ನಿರ್ಧಾರ ಮಾಡುವುದಕ್ಕೆ ನಮ್ಮನ್ನು ಒಪ್ಪಿಸಿಕೊಡುವಾಗ ಭವಿಷ್ಯದಲ್ಲಿ ಭಿನ್ನವಾಗಿರುವ ಆಯ್ಕೆಯನ್ನು ಮಾಡುವಾಗ ನಾವು ಸಂತೋಷದಿಂದ ನಮ್ಮ ಜೀವಿತ ಮುಖ್ಯಭಾಗವನ್ನು ನಿಯಂತ್ರಿಸುವ ಸ್ವಾತಂತ್ರವನ್ನು ಒಪ್ಪಿಸಿ ಬಿಡುತ್ತೇವೆ. ಕಾನೂನು ಕಟ್ಟಳೆಗಳು ನಮ್ಮ ನಕಾರಾತ್ಮಕ ವರ್ತನೆಯನ್ನು ತಡೆಗಟ್ಟಬಹುದು. ಆದರೆ ಮದುವೆ ಮತ್ತು ಕೌಟುಂಬಿಕ ಸಂಬಂಧಗಳು ವರ್ಧಿಸುವಂತೆ ಮಾಡಲು ಅವುಗಳ ಮಧ್ಯೆ ಪ್ರೀತಿಯು ಅಗತ್ಯವಾಗಿದೆ.

ನಾನು ನಿಮ್ಮನ್ನು ಎಂದಿಗೂ ಕೈಬಿಡುವುದಿಲ್ಲ, ಎಂದಿಗೂ ತೊರೆಯುವುದಿಲ್ಲ ಎಂದು ಯೇಸುಕ್ರಿಸ್ತನು ಬದ್ಧತೆಯ ವಾಗ್ದಾನ ಮಾಡಿದ್ದಾನೆ (ಇಬ್ರಿಯ 13:5). ಇದು ವೈಯಕ್ತಿಕವಾಗಿ ನಿಮಗೆ ಯಾವ ಅರ್ಥವನ್ನು ಕೊಡುತ್ತದೆ? ನೀವು ನಿಮ್ಮ ಜೀವನ ಸಂಗಾತಿ, ನಿಮ್ಮ ಮಕ್ಕಳು ಮತ್ತು ನಿಮ್ಮ ಸಹವಿಶ್ವಾಸಿಗಳಿಗೆ ತೋರುವ ಬದ್ಧತೆಗೆ ಯೇಸುಕ್ರಿಸ್ತನ ಬದ್ಧತೆಯ ಯಾವ ಪರಿಣಾಮವನ್ನು ಬೀರುತ್ತದೆ?

**ಶುಕ್ರವಾರ** **ಮೇ 17**

**ಮುಂದಿನ ಆಲೋಚನೆ :** ಎಲೆನ್ ಜಿ ವೈಟ್‌ರವರ "A Sacred circle" PP 177-180. The Adventist Home ಎಂಬ ಪುಸ್ತಕ Unity in our work, PP 236-238 ಪುಸ್ತಕ, Testimonies for the church, Vol. 6 ಕುಟುಂಬ ಐಕ್ಯತೆಯ ಫಲಿತಾಂಶಗಳು : ಕ್ರೈಸ್ತರ ಮೊದಲ ಕೆಲಸವೇನೆಂದರೆ ಕುಟುಂಬದಲ್ಲಿ ಒಂದುಗೂಡುವುದು. ಮನೆಯೊಳಗೆ ಕುಟುಂಬದ ಸದಸ್ಯರು ತಮ್ಮ ಕೆಲಸದಲ್ಲಿ ಹೆಚ್ಚು ಆಪ್ತರಾಗಿ ಒಗ್ಗೂಡಿದರೆ ತಂದೆ-ತಾಯಿ, ಗಂಡುಮಕ್ಕಳು, ಹೆಣ್ಣುಮಕ್ಕಳು ಮನೆಯ ಹೊರಗೆ ಬೀರುವ ಪ್ರಭಾವವು ಹೆಚ್ಚಾಗಿ ಮೇಲೆತ್ತುವುದಾಗಿಯೂ ಸಹಾಯ ಮಾಡುವುದಾಗಿಯೂ ಇರುತ್ತವೆ- ವೈಟಮ್ಮನವರ ಅಡ್ವೆಂಟಿಸ್ಟ್ ಹೋಮ್ಸ್ ಪುಸ್ತಕದ ಪುಟ 37.

**ಕುಟುಂಬ ಐಕ್ಯತೆಯ ರಹಸ್ಯ (ಗುಟ್ಟು) :** ಕುಟುಂಬಗಳಲ್ಲಿ ಮತ್ತು ಸಭೆಗಳಲ್ಲಿ ಉಂಟಾಗುವ ಒಡಕು ಮತ್ತು ಮನಸ್ತಾಪ ಕ್ರಿಸ್ತನಿಂದ ಬೇರ್ಪಡಿಸುತ್ತದೆ. ಕ್ರಿಸ್ತನ ಹತ್ತಿರ ಬರುವಾಗ ಒಬ್ಬರಿಗೊಬ್ಬರು ಹತ್ತಿರವಾಗುತ್ತೇವೆ. ಸಭೆಯಲ್ಲಿ ಮತ್ತು ಕುಟುಂಬದಲ್ಲಿರುವ ನಿಜವಾದ ಐಕ್ಯತೆಯ ಗುಟ್ಟು ವ್ಯವಹಾರ ಚಾತುರ್ಯವೂ ಅಲ್ಲ, ನಿರ್ವಹಣೆಯೂ ಅಲ್ಲ. ಕಷ್ಟಗಳನ್ನು ಮಣಿಸುವ ಅತಿಮಾನುಷ ಪರಿಶ್ರಮವೂ ಅಲ್ಲ. ಇವುಗಳನ್ನು ಬಹಳವಾಗಿ ಮಾಡಬೇಕಾಗಿದ್ದರೂ ಕ್ರಿಸ್ತನೊಂದಿಗೆ ಒಂದಾಗಿರುವುದೇ ಇದರ ಗುಟ್ಟು– A Sacred Circle, ಅಧ್ಯಯನದ ಪುಟ179.

## ಚರ್ಚಿಸಬೇಕಾದ ಪ್ರಶ್ನೆಗಳು

1. ಕುಟುಂಬದ ಐಕ್ಯತೆಗೆ ವಿರೋಧವಾಗಿರುವ ಸಮಾಜದಲ್ಲಿರುವ ಬಲಗಳ ಬಗ್ಗೆ ಮಾತನಾಡಿರಿ. ಇಂತಹ ಬಲಗಳ ಪ್ರಭಾವಕ್ಕೆ ಗುರಿಯಾಗಿರುವ ಕುಟುಂಬಗಳಿಗೆ ಯಾವ ವ್ಯವಹಾರ್ಯವಾದ ಪರಿಹಾರಗಳನ್ನು ನೀವು ನೀಡಬಲ್ಲಿರಿ?

2. ಸಭೆಯಲ್ಲಿ ಈವಾಗ ಅಂತಹ ಕುಟುಂಬವಿರುವುದೆ? ಹಾಗಾದರೆ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿರುವ ಪ್ರತಿಯೊಬ್ಬ ಸದಸ್ಯರಿಗೂ ಒಂದು ತರಗತಿಯಾಗಿ ನೀವೇನು ಸಹಾಯ ಮಾಡುವಿರಿ?

3. ಸಮರ್ಪಣೆಯ ಪೂರ್ಣಪ್ರಶ್ನೆಯ ಬಗ್ಗೆ ಚರ್ಚಿಸಿರಿ. ಕ್ರೈಸ್ತೀಯ ಸಂದರ್ಭಕ್ಕೆ ಇದನ್ನು ಹೇಗೆ ಅರ್ಥೈಸಿಕೊಳ್ಳಬಹುದು? ಯಾವ ರೀತಿಯಲ್ಲಿ ನಿಯಮಗಳು ದುರುಪಯೋಗವಾಗಿವೆ?

4. ಕುಟುಂಬದ ಐಕ್ಯತೆಯ ಸಂಬಂಧವಾಗಿರುವ ಯಾವ ನಿಯಮಗಳು ಸಭೆಯ ಐಕ್ಯತೆಗೂ ಸಹ ಅನ್ವಯವಾಗುತ್ತವೆ?